ಬಿತ್ತಿದರು. ಕಾಳು ಕಾಳುಗಳು ಸಂಸಾರ ಮಾಡಿದಂತೆ ಆಯಾಯ ಭಾಷೆಯ ಹೊಲಗದ್ದೆ ಮಾಳೆಗಳಲ್ಲಿ ಕಾಲಾನುಸಾರ ಕಥೆಗಳ ಫಸಲು ಬೆಳೆಯಿತು. ಸಾವಿರಾರು ವರ್ಷ ಬಾಳಿದ್ದ. ಆ ಕಥೆ ಎಂಬ ಒಬ್ಬ ಮನುಷ್ಯ ನಾನು ಹೇಳಲೇಬೇಕೆಂದುಕೊಂಡಿದ್ದ ಕಥೆಯನ್ನು ತಾನು ಹೇಳಲು ಸಾಧ್ಯವೇ ಆಗಲಿಲ್ಲ ಎಂದು ಅಸುನೀಗಿದ. ನಾಗರಿಕತೆಯ ದೇವರ ಹೆಸರಿನ ಕಳೆಯನ್ನು ಅವಾಗಲೇ ತುಂಬಾ ಬೆಳೆಸಿಬಿಟ್ಟಿತ್ತು. ದೇವರ ಹೆಸರಿನ ಕಥೆಗಳು ಪವಿತ್ರ ಪುರಾಣಗಳಾಗಿ ಆಳುತ್ತಿದ್ದವು.

ನರಕದ ಕಥೆಗಳು ಹಾಗೇ ಉಳಿದಿದ್ದವು. ದಿವ್ಯ ಪ್ರೇಮ ಕಾಮನೆಯ ಸರಸ ಸುಗ್ಗಿಯ ಹಗಲು ರಾತ್ರಿಯ ಸೂರ್ಯ ಚಂದ್ರರ ಆಕಾಶದಷ್ಟು ಕಥೆಗಳು ಬಹಳ ಕಾಲದಿಂದ ಬಾಯಿಲ್ಲದೆ ಮೂಕವಾಗಿದ್ದವು. ಆ ತಬ್ಬಲಿ ನಕ್ಷತ್ರಗಳನ್ನು ಯಾರೊ ಕೆಲವರು ಅಂತವರೇ ದಿಟ್ಟಿಸಿದರು. ಅವನ್ನೆ ಮೈದುಂಬಿದರು. ಅವನ್ನೇ ಭಾವದ ಕುಲುಮೆಯಲಿ ಹದವಾಗಿಸಿ ಮನುಷ್ಯನ ಕಥೆಯಾಗಿಸಿದರು. ಆ ಮೂಲಕ ಭಾಷೆಗಳು ಅಸಂಖ್ಯಾತ ಕಥೆಗಳಿಂದ ಜೀವನದ ನಿತ್ಯದ ಹೊಳೆಯಲ್ಲಿ ಮಿಂದವು. ಕಥೆಯ ಚಿಲುಮೆಗಳು, ತೊರೆಗಳು, ಮಹಾನದಿಗಳು ಭೂಮಿ ಎಂಬ ಮನುಷ್ಯನ ಮೈತುಂಬ ಹರಿದಾಡಿದವು.

ಆ ಕಥೆ ಎಂಬ ಆದಿ ಮಾನವನ ಆತ್ಮ ಹೀಗೆ ನೀರಾಗಿ ಮನುಷ್ಯರ ಸಂವೇದನೆಯಲ್ಲಿ ಜಿನುಗುತ್ತಲೇ ಬಂದಿದೆ. ಎಲ್ಲರಿಗೂ ದಾಹವಿದೆ ನಿಜ. ಎಲ್ಲರೂ ನೀರಿಂದಲೇ ದಾಹವಳಿಸಿಕೊಳ್ಳುವರು ನಿಜ. ಆದರೆ ಕೆಲವರು ಮಾತ್ರ ಕಥೆ ಎಂಬ ಆದಿಮಾನವನ ಮೂಲಕ ಬೊಗಸೆ ನೀರ ಕುಡಿದು ಆ ನೀರೆಲ್ಲವನ್ನು, ಕಥೆ ಎಂಬುದನ್ನೆ ನರನಾಡಿಯಾಗಿಸಿಕೊಂಡು ಕಥೆಗಳಾಚೆಯ ಕಥೆ ಬರೆಯುತ್ತಿರುತ್ತಾರೆ. ನಲ್ಲಿಯ ನೀರು ಕುಡಿದವರದೂ ಒಂದು ಅನುಭವವೇ... ಹಿಮಾಲಯದ ಗಂಗೆಯ ಚಿಲುಮೆಯಲಿ ಹುಟ್ಟಿದವರ ನೀರೂ ಕೂಡ ನೀರೇ... ನೀರೆಂದರೆ, ತಾಯಿ; ಹೆಣ್ಣು ದೇವಿ... ಸರ್ವಸ್ವ. ನೀರೀಗ ಮಾರಾಟದ ಸರಕು. ಕಥೆ ಎಂಬುದೀಗ ಯಾರು ಬೇಕಾದರೂ ಬಜಾರಿನಲ್ಲಿ ಹರಾಜು ಹಾಕುವಂತಹ ಮಾಲು... ಅಭಿವ್ಯಕ್ತಿಯ ನಿಯಂತ್ರಣಕ್ಕೂ ಮಿತಿಯಿದೆ; ಅಂತೆಯೇ ಅದರ ಮುಕ್ತ ಅಭಿವ್ಯಕ್ತಿಗೂ ಮಿತಿಗಳಿವೆ.

ಕಥೆ ಎಂಬ ಆ ಆದಿಮಾನವ ಒಂದು ದಿನ ಜಾಗತೀಕರಣದ ವಿಶ್ವ ಮಾರುಕಟ್ಟೆಯ ವಿಶಾಲ ಪ್ರಾಂಗಣಗಳಿಗೆ ಬಂದು ಬಹಳ ಹುಡುಕಾಡಿದ. ಮನುಷ್ಯ ವ್ಯಾಪಾರ ವ್ಯಾಪಕವಾಗಿ ಸಾಗಿತ್ತು. ಅವನಿಗೆ ಬೇಕಾದ್ದು ಸಿಗಲೇ ಇಲ್ಲ. "ತನಗೆ ಭೂಮಿ ತಾಯಿಯ ಹೊಕ್ಕುಳ ಬಳ್ಳಿ ಬೇಕು" ಎಂದ ಕೂಡಲೇ ಅವನನ್ನು ಹೊರಗೆ ಹಾಕುತ್ತಿದ್ದರು. ಜಾಹೀರಾತು ಮಾಧ್ಯಮಗಳಿಗೆ ಜಾಹೀರಾತು ನೀಡಿದ. ತಕ್ಷಣ ಅವನನ್ನು ಬಂಧಿಸಿದರು. 'ಹೊಟ್ಟೆ ಬಗೆದು ಹೊಕ್ಕುಳ ತಂದು ಕೊಡಲು ನಮ್ಮನ್ನು ಏನೆಂದು ತಿಳಿದಿರುವೇ... ನಾವು ಮನುಷ್ಯರು. ತಾಯಗರ್ಭದ ಬೇರನ್ನು ಸೀಳುವುದಿಲ್ಲ' ಎಂದು ಅಬ್ಬರಿಸಿದರು. ಆ ಕಥೆ ಎಂಬ ಆದಿಮಾನವನನ್ನು ಕಾಲಾಂತರದ ಪಂಜರಕ್ಕೆ ಬಿಗಿಯಲಾಗಿತ್ತು.

ಮಾರುಕಟ್ಟೆಯಲ್ಲಿ ಹೊಸಕಥೆಯ ಮಾಲುಗಳು ಬಿಕರಿ ಆಗುತ್ತಿದ್ದವು. ಅಲ್ಲೀಗ ಆದಿಮಾನವನ ಕಥಾ ಗೆಳೆಯನಾಗಿದ್ದ ಕಥೆ ಎಂಬ ದೇವರೂ ಕೂಡ ಇರಲಿಲ್ಲ. ಬೇಕಿದ್ದರೆ ದೇವರ ಪಳೆಯುಳಿಕೆಗಳು ರಾಜಕೀಯವಾಗಿ ಸಿಗುತ್ತಿದ್ದವು. ದೇವರ ಮೂಳೆ, ಚಕಳ, ಬೂದಿ ಕಥೆಗಳಿಗೆ ಸಾಕಷ್ಟು ಮಾರುಕಟ್ಟೆಯಿತ್ತು. ಜುಜುಬಿ ಹರಾಜು ಕಥೆಗಾರರು ರಾರಾಜಿಸುತ್ತಿದ್ದರು. ಮತ್ತನೇಕ ಯುವ ಕಥೆಗಾರರು ಹೊಕ್ಕುಳಿಲ್ಲದೆ ಬರೆಯುತ್ತಿದ್ದರು. ಭಾವವಿಲ್ಲದೆ ಭಾಷೆಯ ಸೆರಗ ಎಳೆಯುತ್ತಿದ್ದರು. ಮನುಷ್ಯರ ದುಃಖವರಿಯದೆ ಸರಸದ ಹಾಡುಗಳು ನೃತ್ಯ ಮಾಡುತ್ತಿದ್ದರು. ತಾವು ಗೀಚಿದ್ದೇ ಒಂದು ಸೂರ್ಯೋದಯ, ಚಂದ್ರೋದಯ ಎಂದು ಸಾಮಾಜಿಕ ಜಾಲ ತಾಣಗಳಲಿ ಹರಿದ ಹೊಕ್ಕುಳ ಬಳ್ಳಿಯ ಮೀಟುತ್ತಿದ್ದರು. ಸರಸವಿರಸ, ಜನನಮರಣಗಳ ಮಾಂಸದಂಗಡಿಯ ಮಾಲಿನ ಕಥೆಗಳಾಗಿ ಬಗೆದು ಸುಲಿದು ಕತ್ತರಿಸಿ ಕಾಲವನ್ನು ತುಂಡರಿಸುತ್ತಿದ್ದವು. ಕೇಳುಜನಮೇಜಯ ಎಂದು ಕಥೆ